(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರು ಸದನ ಬಾವಿಗೆ ಬಂದು ಧರಣಿಯಲ್ಲಿ ನಿರತರಾದರು)

ಅಧ್ಯಕ್ಷರು :- ಶಾಸಕರ ತಮ್ಮ ವೈಯಕ್ತಿಕ ವಿಷಯದ ಬಗ್ಗೆ ಈ ರೀತಿಯಾಗಿ ಪದೇ ಪದೇ ಸದನ ಬಾವಿಗೆ ಬರತಕ್ಕಂಥದ್ದು ಒಳ್ಳೆಯದಲ್ಲ. ಸದನದಲ್ಲಿ ಬೇರೆ ವಿಷಯಗಳ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಬೇಕು. ಈ ರೀತಿಯಾಗಿ ಪದೇ ಪದೇ ಸದನದ ಬಾವಿಗೆ ಬರತಕ್ಕಂಥದ್ದು, ಸದನದ ಕಾರ್ಯಕಲಾಪಕ್ಕೆ ಅಡೆತಡೆ ಮಾಡುವಂತದ್ದು ಸರಿಯಲ್ಲ. ಮಾತನಾಡುವುದಕ್ಕೆ ಸಾಕಷ್ಟು ವಿಷಯಗಳಿವೆ. ಚರ್ಚೆ ಮಾಡುವುದನ್ನು ಬಿಟ್ಟು ಈ ರೀತಿಯಾಗಿ ಪದೇಪದೇ ಡಿಸ್ಟರ್ಬ್ ಮಾಡಿದರೆ ಸದನ ನಡೆಸುವುದು ಹೇಗೆ? ತಾವೆಲ್ಲರೂ ತಮ್ಮ ಸ್ಥಳಗಳಿಗೆ ದಯವಿಟ್ಟು ಹೋಗಿ. ನಿಮ್ಮ ನಾಯಕರ ಜೊತೆ ನೀವುಗಳು ಮಾತನಾಡಿ. ಆನಂತರ ನಿಮ್ಮ ನಾಯಕರು ಮತ್ತು ನೀವು ಮಾನ್ಯ ಮುಖ್ಯ ಮಂತ್ರಿಗಳ ಜೊತೆ ಕುಳಿತು ಮಾತನಾಡಿ. ಸದನದಲ್ಲಿ ಎಲ್ಲದರ ಬಗ್ಗೆಯೂ ನಿರ್ಣಯವಾಗಬೇಕು ಎಂದು ಹೇಳತಕ್ಕಂಥದ್ದು ಸರಿಯಲ್ಲ. ನಿಮ್ಮ ನಾಯಕರನ್ನು ಕರೆದುಕೊಂಡು ಮುಖ್ಯಮಂತ್ರಿಗಳ ಜೊತೆ ಮಾತನಾಡಿ. ಈಗಾಗಲೇ ಎಲ್ಲಾ ವಿಷಯವನ್ನು ಪ್ರಸ್ತಾಪ ಮಾಡಿದ್ದೀರಿ. ಆದರೆ, ಮತ್ತೆ ಮತ್ತೆ ಅದನ್ನೆ ಮಾತನಾಡಿದರೆ ಹೇಗೆ?

ಶ್ರೀ ಟಿ.ಬಿ. ಜಯಚಂದ್ರ :- ಮಾನ್ಯ ಅಧ್ಯಕ್ಷರೆ, ಸಿಓಡಿ ತನಿಖೆ ಮಾಡಿಸುತ್ತೇವೆ ಎಂಬ ಮಾತನ್ನು ಮಾನ್ಯ ಮುಖ್ಯ ಮಂತ್ರಿಗಳು ಈಗಾಗಲೇ ಹೇಳಿದ್ದಾರೆ. ಆದರೆ, ಅವರಿಗೆ ರಕ್ಷಣೆ ಇಲ್ಲ ಎನ್ನತಕ್ಕಂಥದ್ದು ಪ್ರಶ್ನೆಯಾಗಿದೆ.

ನಾಳೆ ಅವರು ಕಾರ್ಯನಿರ್ವಹಿಸುವುದು ಕಷ್ಟವಾಗುತ್ತದೆ. ಯಾವ ಅಧಿಕಾರಿಗಳ ಮೇಲೆ ಅವರು ನೇರವಾಗಿ ಆರೋಪವನ್ನು ಮಾಡುತ್ತಾರೆ, ಅವರನ್ನು ಸ್ಥಳಾಂತರ ಮಾಡಿಸಿ ಅಥವಾ ಅವರ ಮೇಲೆ ಕಾನೂನಿನ ಕ್ರಮ ತೆಗೆದುಕೊಳ್ಳಿ. ಕೊನೆಯದಾಗಿ ಒಂದು ವಾರದಲ್ಲಿಯಾದರೂ ಕ್ರಮ ತೆಗೆದುಕೊಳ್ಳುತ್ತೇನೆ ಎನ್ನುವ ಮಾತನ್ನಾದರೂ ಮಾನ್ಯ ಮುಖ್ಯಮಂತ್ರಿಗಳು ಹೇಳಲಿ. ಏಕೆಂದರೆ ಸದನವನ್ನು ಮುಗಿಸಿ ಹೋಗಿ ಅವರು ಕೆಲಸವನ್ನು ಮಾಡುವುದು ಕಷ್ಟವಾಗುತ್ತದೆ.

ಅಧ್ಯಕ್ಷರು :- ವೆಲ್‌ನಲ್ಲಿ ನಿಂತು ಮಾತನಾಡುವುದು ಯಾವುದು ದಾಖಲೆಗೆ ಹೋಗುವುದಿಲ್ಲ. ವೆಲ್‌ನಲ್ಲಿ ನಿಂತು ಮಾತನಾಡುವುದಕ್ಕೆ ಹೋಗಬೇಡಿ. ಏನಾದರೂ ಮಾತನಾಡುವುದು ಇದ್ದರೆ ನಿಮ್ಮ ಸ್ಥಾನಕ್ಕೆ ಹೋಗಿ ಮಾತನಾಡಿ. ಮಾನ್ಯ ಹುಕ್ಕೇರಿಯವರೆ ಏನೋ ಮಾತನಾಡುತ್ತಿದ್ದೀರಿ.

(ಗೊಂದಲ)

ಶ್ರೀ ಪ್ರಕಾಶ್ ಬಿ. ಹುಕ್ಕೇರಿ :- ನಮ್ಮ ಪರಿಸ್ಥಿತಿ ಕೂಡ ಜಿಲ್ಲೆಯಲ್ಲಿ ಅದೇ ಆಗಿದೆ.

ಅಧ್ಯಕ್ಷರು :- ಮುಖ್ಯಮಂತ್ರಿಗಳು ಮಾತನಾಡುತ್ತಾರೆ.

ಡಾ॥ ಬಿ.ಎಸ್. ಯಡಿಯೂರಪ್ಪ (ಮಾನ್ಯ ಮುಖ್ಯಮಂತ್ರಿಗಳು) : - ಮಾನ್ಯ ಅಧ್ಯಕ್ಷರೆ, ಎರಡು ಕಡೆ ಈ ಘಟನೆಗಳು ಆದ ಕೂಡಲೇ ಇಬ್ಬರು ಮಾನ್ಯ ಸಂಗಮೇಶ್ವರ್ ಮತ್ತು ಅಪ್ಪಾಜಿಯವರು complaint ಗಳನ್ನು ಕೊಟ್ಟಿದ್ದಾರೆ. ಆ complaint ಕೊಟ್ಟ ತಕ್ಷಣ ಒಬ್ಬರನ್ನು ಬಂಧನ ಮಾಡಿದ್ದೇವೆ ಇನ್ನುಳಿದ 9 ಜನ anticipatory bail ತೆಗೆದುಕೊಂಡಿದ್ದಾರೆ. ಇವರು ಯಾರ ಮೇಲೆ complaint ಕೊಟ್ಟಿದ್ದಾರೆ ಅವರು anticipatory bail ತೆಗೆದುಕೊಂಡಿದ್ದಾರೆ. ನಾವು ಕ್ರಮ ಜರುಗಿಸುತ್ತೇವೆ. ಶಾಸಕರು ಲಿಖಿತ ಮೂಲಕ ನನಗೆ ಪತ್ರವನ್ನು ಕೊಟ್ಟು ಇದು COD ತನಿಖೆಯಾಗಬೇಕೆಂದು ಕೇಳಿಕೊಂಡಿದ್ದಾರೆ. ಅದರ ಆಧಾರದ ಮೇಲೆ ಅವರು ಎದ್ದು ನಿಂತು ಚರ್ಚೆ ಮಾಡುವುದಕ್ಕೆ ಮುಂಚೆ ನಾನು ಎದ್ದುನಿಂತುಕೊಂಡು COD ತನಿಖೆ ಮಾಡುತ್ತೇನೆಂದು ಹೇಳಿದ್ದೇನೆ. ಒಂದು ಸಲ COD ತನಿಖೆ ಮಾಡಿದಾಗ ಯಾರ್ಯಾರು ಇದಕ್ಕೆ ಸಂಬಂಧಪಟ್ಟವರು ಇದ್ದಾರೆ ನಿಷ್ಪಕ್ಷಪಾತವಾಗಿ ತನಿಖೆಯಾಗುತ್ತದೆ ತಾನೇ? ನೀವೇ COD ತನಿಖೆಯಾಗಬೇಕೆಂದು ಹೇಳಿದ ಮೇಲೆ ಈ ಘಟನೆ ಬಗ್ಗೆ ತಾನೆ COD ತನಿಖೆಯಾಗಬೇಕಾಗಿರುವುದು. ಇದರಲ್ಲಿ ಯಾರ್ಯಾರ involvement ಇದೆ ಬಂಧನ ಮಾಡುವುದು ಸರಿ ಇದೆಯೋ ಇಲ್ಲವೋ, ಅವರ complaint ಸರಿ ಇದೆಯೋ ಇಲ್ಲವೋ ಇವರ complaint ಸರಿ ಇದೆಯೋ ಇಲ್ಲವೋ ಏನು ಘಟನೆಗಳು ಆಗಿದೆ. ಅಲ್ಲಿರುವ ನಮ್ಮ ಅಧಿಕಾರಿಗಳ ಬಗ್ಗೆ ನಿಮಗೆ ವಿಶ್ವಾಸ ಇಲ್ಲದಿರುವುದರಿಂದ ನಾನು COD ತನಿಖೆಗೆ ಆದೇಶ ಮಾಡಿದ್ದೇನೆ. ಆದ್ದರಿಂದ ನಾನು ಹೇಳುವುದು ಶಾಸಕರಾದ ನಮಗೆ ವಿಶ್ವಾಸವಿಲ್ಲದಿದ್ದರೆ ಇದಕ್ಕೆ ಕೊನೆ ಯಾವಾಗ. ಇದು ಧರಣಿ ಮಾಡುವ ವಿಷಯವೆ? ವೆಲ್‌ಗೆ ಬರುವ ವಿಷಯವೆ? ನೀವು ಬರೆದುಕೊಟ್ಟ ತಕ್ಷಣ ಸರ್ಕಾರ ಯಾವುದಕ್ಕೂ ಮಣಿಯದೆ ಸ್ಪಂಧನ ಮಾಡಿದೆ. ಒಂದು ನಿಮಿಷ ಕೇಳಿ. ಯಾವುದೇ ಕಾರಣಕ್ಕೆ COD ತನಿಖೆಯ ವರದಿ ಬರುವುದಕ್ಕೆ ಮುಂಚೆ ಯಾರನ್ನು suspend ಮಾಡುವುದಿಲ್ಲ, ಯಾವ ಪೊಲೀಸ್‌ರ ಮೇಲೆ ಕ್ರಮ ತೆಗೆದುಕೊಳುವುದಿಲ್ಲ.

ಶ್ರೀ ಟಿ.ಬಿ. ಜಯಚಂದ್ರ :- ಒಂದು ನಿಮಿಷ ತಾವು complete ಮಾಡುವುದಕ್ಕೆ ಮುಂಚೆ..

ಡಾ॥ ಬಿ.ಎಸ್. ಯಡಿಯೂರಪ್ಪ :- ನೀವು ಈ ರೀತಿಯಾದ ಒತ್ತಡ ಮಾಡಿದರೆ ಹೇಗೆ? ನೀವು ಸರ್ಕಾರವನ್ನು ನಡೆಸಿದವರು ಇದ್ದೀರಿ.

ಅಧ್ಯಕ್ಷರು :- ನೀವು ಈ ರೀತಿ ವೆಲ್‌ನಲ್ಲಿ ನಿಂತು ಮಾತನಾಡಬೇಡಿ. ಮಾನ್ಯ ಮುಖ್ಯಮಂತ್ರಿಗಳು ಹೇಳಿಕೆಯನ್ನು ಕೊಡಲಿ.

ಡಾ॥ ಬಿ.ಎಸ್.ಯಡಿಯೂರಪ್ಪ :- ನಾನು conclude ಮಾಡಿ ಬಿಡುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ :- ಒಂದು ನಿಮಿಷ ತಾವು conclude ಮಾಡುವುದಕ್ಕೆ ಮುಂಚೆ, ನೀವು COD ಗೆ refer ಮಾಡಿದಿರಿ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. COD ಯಿಂದ ಅಧಿಕಾರಿಗಳ ಕರ್ತವ್ಯ ಲೋಪದ ಬಗ್ಗೆ ವರದಿಯನ್ನು ತರಿಸಿಕೊಂಡು ಒಂದು ವಾರದಲ್ಲಿ ಕ್ರಮ ತೆಗೆದುಕೊಳ್ಳುತ್ತೇನೆ ಎನ್ನುವಂಥ ಮಾತನ್ನಾದರೂ ಹೇಳಿ. ಅವರಿಗೆ ಆ ತರಹ ನಿರ್ದೇಶನ ಕೊಡಿ. ಏನು ಮಾಡದಿದ್ದರೆ ಅವರು ಕೆಲಸವನ್ನು ನಿರ್ವಹಿಸುವುದು ಕಷ್ಟವಾಗುತ್ತದೆ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ :- ಗೌರವಾನ್ವಿತ ಮಾನ್ಯ ಮುಖ್ಯಮಂತ್ರಿಗಳು COD ತನಿಖೆಗೆ ಆರ್ಡರ್ ಮಾಡಿದಿರಿ ಬಹಳ ಸಂತೋಷ. ಅವರು COD ತನಿಖೆ ಬೇಡಿದರು, ನೀವು ಮಾಡಿದಿರಿ. ಆ ಆಫೀಸರ್ ಅಲ್ಲಿದ್ದರೆ pressure ಆಗುತ್ತದೆ. ನ್ಯಾಯವನ್ನು ಒದಗಿಸಿ ಕೊಡುವುದಕ್ಕಾಗುವುದಿಲ್ಲ. ತಾವು ಕೊನೆಯದಾಗಿ ಹೇಳಿದ್ದೀರಿ ನಾನು suspend ಮಾಡುವುದಿಲ್ಲವೆಂದು at least ಅವರನ್ನು transfer ಆದರೂ ಮಾಡಿ. ಅವನು ಅಲ್ಲಿದ್ದರೆ ನ್ಯಾಯವನ್ನು ಒದಿಗಿಸಿ ಕೊಡುವುದಕ್ಕಾಗುವುದಿಲ್ಲ.

ಡಾ॥ ಬಿ.ಎಸ್.ಯಡಿಯೂರಪ್ಪ(ಮಾನ್ಯ ಮುಖ್ಯಮಂತ್ರಿಗಳು) :- ತಮಗೆ ಸಮಾಧಾನವಾಗುವುದಿದ್ದರೆ ಅವರನ್ನು transfer ಮಾಡುತ್ತೇನೆ.

(ಸದನದ ಬಾವಿಯಿಂದ ಎಲ್ಲಾ ಮಾನ್ಯ ಸದಸ್ಯರುಗಳು ತಮ್ಮ ಸ್ಥಾನಕ್ಕೆ ಹೋದರು)